ಅಂಗೆಲ್ಲ ಆಡಿ ಆ ಮಗಾನಾ ಎಳ್ಕೊಂಡು ಬರ್ಬೇಕಾಗಿತ್ತಾ? ಅಷ್ಟು ವೈನಾಗಿ ನಡೀತಿದ್ದ ನಾಟ್ಕವಾ ನಿಲ್ಸಿಬುಟ್ಳಲ್ಲ... ಆ ಮಗನಾದ್ರೂ ಏನು ಅಂದ್ಕಾಳಾಕಿಲ್ಲ...' ಎಂದು ಬೇಸರದಿಂದ ಅಣ್ಣ ನುಡಿದಾಗ, ಹೆಂಡತಿಯ ಅನಿರೀಕ್ಷಿತ ನಡೆಯಿಂದ ಮೊದಲೇ ಬೇಸರಗೊಂಡಿದ್ದ ಮಾದುವಿಗೆ ಇನ್ನಷ್ಟು ಬೇಸರ ಆಯಿತು.

'ಇವಳು ಅದ್ಯಾಕೆ ಇಂಗೆ ಆಡ್ತಾಳೋ ನಂಗಂತೂ ಗೊತ್ತಾಗ್ತಾ ಇಲ್ಲ ಕಣಣ್ಣ. ಇವಳು ಇಂಗಾಡ್ತಳೆ ಅಂತಾನೆ ಮಕ್ಕಳು ನಾಟಕದ ಇಚಾರನೇ ಮನೆಯಲ್ಲಿ ಹೇಳ್ಳಿಲ್ಲ ಅನ್ಸುತ್ತೆ. ಈಗೀಗಂತೂ ಎಂಗೆಂಗೊ ಆಡ್ತಾಳೆ. ಮಕ್ಕಳಂತೂ ಶಾನೆ ಎದರ್ಕಂಡಿರ್ತವೆ. ವೀರೂ ಅಂತೂ ಅವರ ಅವ್ವನತವ ಇರೋಕೆ ಇಷ್ಟ ಪಡಾಕಿಲ್ಲ. ಮಾತಾಡಾಕೂ ಒಲ್ಲೆ ಅಂತಾನೆ. ಅವ್ನಿಗೆ ನಮ್ಮ ಮನೆಗಿಂತ ದೊಡ್ಡಪ್ಪನ ಮನೇನೆ ವೈನಾಗಿತೆ. ನಂಗಂತೂ ಏನೂ ಗೊತ್ತಾಗ್ತಾನೇ ಇಲ್ಲ' ಎಂದು ದುಗುಡದಿಂದ ನುಡಿದ.

ಮಾದು ಮನೆಗೆ ಬರೋ ಹೊತ್ತಿಗೆ ವಾರಿಜ ಮಕ್ಕಳನ್ನು ದನಕ್ಕೆ ಚಚ್ಚಿದಂತೆ ಚಚ್ಚಿ ಹಾಕಿದ್ದಳು. ಅವಳ ಏಟಿನಿಂದ ಮೂರೂ ಮಕ್ಕಳು ಅಳುವುದನ್ನೂ ಮರೆತು ಪತರುಗುಡುತ್ತಿದ್ದವು. ಮನೆಯೊಳಗೆ ಬಂದ ಮಾದು, ಏಟು ತಿಂದು ಭಯದಿಂದ ಗಡಗಡ ನಡುಗುತ್ತಿದ್ದ ಮಕ್ಕಳನ್ನೂ, ರೋಷದಿಂದ ದುಮುಗುಡುತ್ತಿದ್ದ ಹೆಂಡತಿಯನ್ನೂ ನೋಡಿ ಪರಿಸ್ಥಿತಿ ಕೈ ತಪ್ಪಿಹೋಗಿರುವುದು ಅರಿವಾಗಿ ತಲೆ ಮೇಲೆ ಕೈಹೊತ್ತು ಸುಮ್ಮನೆ ಕುಳಿತು ಬಿಟ್ಟ. ಅಪ್ಪನ ಹತ್ತಿರಕ್ಕೂ ಬರಲು ಮಕ್ಕಳು ಹೆದರಿ ನಿಂತುಬಿಟ್ಟಿದ್ದರು. ಅದೆಷ್ಟೋ ಹೊತ್ತು ಹಾಗೆಯೇ ಕುಳಿತಿದ್ದರೋ, ಜಗದೀಶ ಮತ್ತು ಶಾಂಭವಿ ಎರಡು ಪಾತ್ರೆಗಳನ್ನು ಹಿಡಿದು ಒಳಬಂದರು. ಶಾಂಭವಿ ಒಂದೂ ಮಾತಾಡದೆ ಪಾತ್ರೆಗಳನ್ನು ಒಳಗಿಟ್ಟು ಬಂದು ಹೆದರಿ ನಡುಗುತ್ತಿದ್ದ ಮೂರೂ ಮಕ್ಕಳನ್ನು ತನ್ನೆರಡೂ ಕೈಗಳಿಂದ ಬಳಸಿ ಅಡುಗೆ ಮನೆಗೆ ಕರೆದುಕೊಂಡು ಹೋದಳು. ವೀರೂ ದೊಡ್ಡಮ್ಮನನ್ನು ಕಂಡರೂ ಉಸಿರು ಬಿಡಲಾರದಷ್ಟು ಹೆದರಿಹೋಗಿದ್ದ. ಶಬ್ದವಾಗದಂತೆಯೇ ಬಿಕ್ಕಳಿಸುತ್ತಿದ್ದುದನ್ನು ನೋಡಿ ದ್ರವಿಸಿಹೋದಳು. ಮಕ್ಕಳ ಮೈಮೇಲೆ ಮೂಡಿದ್ದ ಬಾಸುಂಡೆಗಳನ್ನು ಕಂಡು ದುಃಖ ಉಮ್ಮಳಿಸಿ, ಕಣ್ಣೀರು ಹಾಕುತ್ತಲೇ ಬಾಸುಂಡೆಗಳಿಗೆ ಕೊಬ್ಬರಿ ಎಣ್ಣೆ ಹಚ್ಚಿದಳು. 'ರಾಕ್ಷಸಿ ಅವಳು, ಎಳೆ ಮಕ್ಕಳು ಅನ್ನೋದೂ ನೋಡದೆ ಬಾರಿಸಿದ್ದಾಳಲ್ಲ' ಎಂದು ಬೈದುಕೊಳ್ಳುತ್ತಾ, ತಟ್ಟೆಗೆ ಅನ್ನ ಹಾಕಿ ಸಾರು ಸುರಿದು ಒಂದಿಷ್ಟು ತುಪ್ಪ ಹಾಕಿ ಕಲಸಿ ಮಕ್ಕಳಿಗೆ ತುತ್ತು ಮಾಡಿ ತಿನ್ನಿಸಿದಳು. ಬಿಕ್ಕಳಿಸುತ್ತಲೇ ಮಕ್ಕಳು ಊಟ ಮಾಡಿದಾಗ ಸಮಾಧಾನ ಅನಿಸಿತು ಶಾಂಭವಿಗೆ. ಮಕ್ಕಳ ಬಾಯಿ ತೊಳೆದು ವೀರುವನ್ನು ಎತ್ತಿಕೊಂಡು ಅವರಿಬ್ಬರನ್ನೂ ಕೈಹಿಡಿದು ನಡೆಸಿಕೊಂಡು ಮಲಗುವ ಕೋಣೆಗೆ ಕರೆದೊಯ್ದು ಮಲಗಿಸಿದಳು. ಅವಕ್ಕೂ ಸಾಕಾಗಿತ್ತೇನೋ, ಮಲಗಿದ ಕೂಡಲೇ ಬಿಕ್ಕಳಿಸುತ್ತಲೇ ನಿದ್ರೆಗೆ ವಶವಾದವು. ಮಕ್ಕಳಿಗೆ ಮೈತುಂಬಾ ಹೊದಿಸಿ ಬಾಗಿಲು ಎಳೆದುಕೊಂಡು ಹೊರಬಂದಳು. ಇಷ್ಟೆಲ್ಲ ಆದರೂ ನಡುಮನೆಯಲ್ಲಿದ್ದ ಮೂವರೂ ಒಂದೂ ಮಾತಾಡದೆ ಕುಳಿತಿದ್ದರು. ಶಾಂಭವಿ ಗಂಡನತ್ತ ತಿರುಗಿ ಮಾತಾಡುವಂತೆ ಸನ್ನೆ ಮಾಡಿದಳು. ಅವರು ಬಾಯಿ ತೆಗೆಯಬೇಕು ಅನ್ನುವಷ್ಟರಲ್ಲಿ ವಾರಿಜಳೇ, 'ಭಾವ ಇನ್ನು ಮುಂದೆ ವೀರು ಇಲ್ಲಿದ್ದು ಓದುವುದು ಬೇಡ, ನಮ್ಮ ಅಣ್ಣನ ಮನೆಯಲ್ಲಿ ಬಿಡ್ತೇನೆ. ಅವನ ಮನೆಯಲ್ಲಿ ಇಬ್ಬರು ಗಂಡುಮಕ್ಕಳು ಇದ್ದಾರಲ್ಲ, ಅವರನ್ನ ನೋಡಿಕೊಂಡಾದರೂ ಗಂಡುಹುಡುಗನ ತರ ಇರೋದನ್ನ ಕಲಿಯಲಿ' ಎಂದು ಕಡ್ಡಿ ತುಂಡಾಗುವಂತೆ ಹೇಳಿ, ಉತ್ತರಕ್ಕೂ ಕಾಯದೆ ಕೋಣೆಯೊಳಗೆ ಹೋಗಿಬಿಟ್ಟಳು. ಎಲ್ಲರೂ ದಿಗ್ಭ್ರಾಂತರಾಗಿ ಮಾತೇ ಹೊರಡದೆ ಕುಳಿತು ಬಿಟ್ಟರು.

ವಾರಿಜ ಇಷ್ಟೊಂದು ಖಡಾಖಂಡಿತವಾಗಿ ಹೇಳಿದ್ದಾಳೆ ಅಂದಮೇಲೆ ಅದು ನಡೆಯದೇ ಹೋದರೆ ಸುಮ್ಮನೆ ಇರ್ತಾಳಾ? ಆದರೆ, ಇಡೀ ಮನೆಗೆ ಇರೋ ಒಬ್ಬನೇ ಒಬ್ಬ ಗಂಡು ಮಗನನ್ನು ಅದು ಹೇಗೆ ಬೇರೆಯವರ ಮನೆಗೆ ಬಿಡೋಕೆ ಆಗುತ್ತೆ? ಈ ಮನೆಯಲ್ಲಿ ರಾಜಕುಮಾರನಂಗೆ ಬೆಳೀತಾ ಇರೋ ಮನೆ ಮಗನನ್ನು ಎಲ್ಲೋ ಹೆಂಗೊ ಬೆಳೆಯೋಕೆ ಬಿಡೋದು ಸರೀನಾ? ಸ್ವಂತ ಅಣ್ಣನೇ ಆದ್ರೂ ಹೆತ್ತ ಅಪ್ಪನಂತೆ, ದೊಡ್ಡಪ್ಪನಂತೆ ಪ್ರೀತಿ ಮಮತೆಯಿಂದ ಕಾಣೋಕೆ ಸಾಧ್ಯನಾ? ಇಷ್ಟೆಲ್ಲಾ ಶ್ರೀಮಂತಿಕೆ ಇದ್ದೂ, ಮನೆಯವರೆಲ್ಲರ ಇಷ್ಟೊಂದು ಪ್ರೀತಿ ಮಮತೆ ಗಳಿಸಿಯೂ, ಯಾರೂ ಇಲ್ಲದ ಅನಾಥನಂತೆ ಬೆಳೆಯಲು ಅವನಿಗೇನು ಕರ್ಮ? ಈ ಮನೆ ಮಕ್ಕಳಿಗೂ ವೀರೇಶನೆಂದರೆ ಪಂಚಪ್ರಾಣ. ಅವರಾದರೂ ಹೇಗೆ ಪ್ರೀತಿಯ ತಮ್ಮನನ್ನು ಬಿಟ್ಟು ಇರುತ್ತಾರೆ. ಹಿರಿಯರಾದ ನಾವಾದರೂ ಅವನನ್ನು ಬಿಟ್ಟು ಇರಲು ಸಾಧ್ಯವೇ, ಈ ವಾರಿಜ ಯಾಕೆ ಕಡ್ಡಿನಾ ಗುಡ್ಡ ಮಾಡ್ತಾ ಇದ್ದಾಳೆ, ವೀರು ಅವಳು ಹೆತ್ತ ಮಗುವೇ ಆದರೂ ಮಾದುವಿಗೂ ಮಗನಲ್ಲವೇ? ಅವನೂ ಒಪ್ಪೊ ಬೇಕಲ್ಲವೇ? ಹಿರಿಯರಾದ ನಾವಿದ್ದೀವಿ, ನಾವೂ ಒಪ್ಪೊಬೇಕಲ್ವ? ಏನೋ ದುಡುಕಿ ಮಾತಾಡ್ತಾ ಇದ್ದಾಳೆ, ಬೆಳಿಗ್ಗೆ ನೋಡೋಣ, ಅಷ್ಟು ಹೊತ್ತಿಗೆ ಅವಳ ಕೋಪವೂ ಕಡಿಮೆ ಆಗಿರುತ್ತೆ ಅಂತ ಅಂದುಕೊಂಡು, 'ಮಾದು ಇವತ್ತು ನೀನೂ ನಮ್ಮನೇಲೆ ಮಂಕಾ, ನೀನಲ್ಲಿದ್ರೆ ನಿಂಗೂ ವಾರಿಜಂಗೂ ಜಗಳ ಆಗೋದು ದಿಟ, ಇವತ್ತು ಅವಳ್ನ ಅವಳ ಪಾಡಿಗೆ ಬುಟ್ಬುಬುಡೋನ, ವತ್ತಾರಿಕೆ ಏನು ಎತ್ತ ಅಂತ ನೋಡ್ಕೊಳನಾ, ಎದ್ದು ನಡೆ' ಅಂತ ಜಗದೀಶ ಗರಬಡಿದಂಗೆ ಕುಂತಿದ್ದ ತಮ್ಮನನ್ನು ಎಬ್ಬಿಸಿಕೊಂಡು ತಮ್ಮನೆಯತ್ತ ನಡೆದರು. ಶಾಂಭವಿ ಬಾಗಿಲನ್ನು ಮುಂದಕ್ಕೆ ಹಾಕಿಕೊಂಡು ಅಣ್ಣ ತಮ್ಮಂದಿರನ್ನು ಹಿಂಬಾಲಿಸಿದಳು. ಅಣ್ಣ ತಮ್ಮಂದಿರಿಬ್ಬರಿಗೂ ಊಟ ಬೇಡವಾಗಿತ್ತು, ಸೀದಾ ಮಲಗುವ ಕೋಣೆ ಹೊಕ್ಕು ಮಲಗುವ ಸಿದ್ಧತೆ ನಡೆಸಿದಾಗ, ಶಾಂಭವಿಯೂ ಊಟ ಮಾಡಿ ಅಂತ ಹೇಳಲಾರದೆ ಮಕ್ಕಳು ಮಲಗಿದ್ದ ಕೋಣೆಗೆ ಹೋಗಿ ಮಲಗಿದಳು. ಮಕ್ಕಳು ಊಟ ಮಾಡಿ ಸಂಜೆ ನಡೆದುದನ್ನು ಮರೆತು ನಿದ್ದೆ ಮಾಡುತ್ತಿದ್ದದ್ದು ಶಾಂಭವಿಗೆ ಸ್ವಲ್ಪ ಸಮಾಧಾನ ತರಿಸಿ, ನಿದ್ರಿಸುವ ಪ್ರಯತ್ನ ನಡೆಸಿದಳು.

ಬೆಳಿಗ್ಗೆ ಇವರು ಏಳುವ ಹೊತ್ತಿಗೆ ಆ ಮನೆಯಲ್ಲಾಗಲೇ ಎಲ್ಲರೂ ಎದ್ದು ಗಡಿಬಿಡಿ ಮಾಡುತ್ತಿರುವ ಸದ್ದು ಕೇಳಿಸಿತು. ಎದ್ದು ಸರಸರನೇ ಆ ಮನೆಗೆ ಬಂದರೆ ವಾರಿಜ ವೀರುವಿನ ಬಟ್ಟೆ ಪುಸ್ತಕಗಳನ್ನೆಲ್ಲ ಜೋಡಿಸಿ ಬ್ಯಾಗುಗಳಲ್ಲಿ ಇರಿಸಿ ಅಣ್ಣನ ಮನೆಗೆ ಹೊರಡಲು ಸಿದ್ಧವಾಗಿದ್ದಳು. ಗಂಡ, ಭಾವ, ಅಕ್ಕ ಮೂರೂ ಜನ ಒಟ್ಟಿಗೆ ಬಂದಿದ್ದನ್ನು ನೋಡಿ, 'ವೀರೂನಾ ಕರ್ಕೊಂಡು ಹೋಗ್ತಾ ಇದ್ದೀನಿ, ಇದಕ್ಕೇನಾದಾರೂ ನೀವಾಗಲೀ, ನಿಮ್ಮ ತಮ್ಮ ಆಗಲಿ ಅಡ್ಡಿ ಮಾಡಿದ್ರೆ ನನ್ನ ಹೆಣ ನೋಡಬೇಕಾಗುತ್ತೆ, ಅಕ್ಕ ನಾನು ಬರೋಗಂಟ ಮಕ್ಕಳನ್ನ ನೋಡ್ಕೊಳ್ಳಿ', ಹಾಗೆಂದವಳೇ ಯಾರಿಗೂ ಮಾತನಾಡಲು ಅವಕಾಶ ಕೊಡದೆ ಅಳುತ್ತಿದ್ದ ವೀರುವನ್ನು ಎಳೆದುಕೊಂಡು ಬ್ಯಾಗನ್ನು ಹಿಡಿದುಕೊಂಡು ಹೊರಟೇ ಬಿಟ್ಟಳು. ಅವಳನ್ನು ತಡೆಯಲಾರದ ಅಸಹಾಯಕತೆಯಿಂದ ಮೂವರೂ ಬೆಪ್ಪಾಗಿ ನಿಂತುಬಿಟ್ಟರು. ದುಃಖ ಉಮ್ಮಳಿಸಿದ ಮಾದು ಅಲ್ಲಿಯೇ ಕುಸಿದು ವೀರು, ವೀರು ಅಂತ ಮಗನಿಗಾಗಿ ಹಂಬಲಿಸಿದ. ಈ ಅನಿರೀಕ್ಷಿತ ತಿರುವಿನಿಂದ ಮುಂದೇನು ಎಂಬ ಚಿಂತೆಯಲ್ಲಿ ಜಗದೀಶ ಮತ್ತು ಶಾಂಭವಿ ತಳಮಳಿಸಿದರು. ಎಲ್ಲವೂ ವಾರಿಜಳೇ ತೀರ್ಮಾನ ತೆಗೆದುಕೊಂಡು ಮನೆಯ ಹಿರಿಯರಿಗಾಗಲಿ, ಕೈಹಿಡಿದ ಗಂಡನಿಗಾಗಲಿ ಅವಕಾಶವನ್ನೇ ಕೊಡದೆ ಹೋದಾಗ ಕೈಮೀರಿ ಹೋದ ಸನ್ನಿವೇಶದಿಂದಾಗಿ ಮುಂದೇನು ಅನ್ನೋ ಚಿಂತೆ ಕಾಡಿತು. ಮಕ್ಕಳು ಇನ್ನೂ ಎದ್ದಿಲ್ಲವಾದ್ದರಿಂದ ವೀರು ಹೋಗಿರುವುದು ಅವರಿಗೆ ಗೊತ್ತಾಗಿರಲೇ ಇಲ್ಲ. ಎದ್ದ ಮೇಲೆ ವೀರು ಎಲ್ಲಿ ಅಂತ ಕೇಳಿದರೆ ಅವರಿಗೇನು ಉತ್ತರ ನೀಡುವುದು ಎಂಬುದು ಮನೆಯವರ ಚಿಂತೆಯಾಗಿತ್ತು.

ಅಣ್ಣನ ಊರಿಗೆ ಹೋಗಲು ಬಸ್ಸು ಹತ್ತಿ ಸಿಕ್ಕ ಸೀಟಿನಲ್ಲಿ ಕುಳಿತು ವೀರುವನ್ನೂ ಕೂರಿಸಿಕೊಂಡು ಬ್ಯಾಗನ್ನು ಮೇಲೆ ಇರಿಸಿ ಕುಳಿತು ನಿಟ್ಟುಸಿರು ಬಿಟ್ಟು ಹೊರಗೆ ನೋಡಿದಳು. ಬರುವ ಅವಸರದಲ್ಲಿ ವೀರೂವಾಗಲಿ, ತಾನಾಗಲಿ ಏನೂ ತಿಂದಿಲ್ಲವೆಂದು ಹೊಟ್ಟೆ ಚುರುಗುಟ್ಟಿದಾಗ ಅರಿವಾಯಿತು. ಅಂಗಡಿಯಲ್ಲಿ ಏನಾದರೂ ತರೋಣವೆಂದರೆ ಅಳುತ್ತಲೇ ಇದ್ದ ವೀರುವನ್ನು ಬಿಟ್ಟು ಕೆಳಗಿಳಿಯುವಂತಿಲ್ಲ, ಅವನನ್ನೂ ಇಳಿಸಿಕೊಂಡು ಇಳಿದರೆ ಕಷ್ಟಪಟ್ಟು ಹಿಡಿದ ಸೀಟು ಯಾರದೋ ಪಾಲಾದರೆ? ಹೀಗೆಲ್ಲ ಚಿಂತಿಸಿ ಕೆಳಗಿಳಿವ ಮನಸ್ಸು ಮಾಡಲೇ ಇಲ್ಲ. ಅಷ್ಟರಲ್ಲಿ ಬಸ್ಸು ಹೊರಟಿದ್ದರಿಂದ ವೀರೂ ಅಳುತ್ತಲೇ ನಿದ್ದೆಗೆ ಜಾರಿದ. ಮಗನ ಮುದ್ದು ಮುಖ ನೋಡಿ ವಾತ್ಸಲ್ಯ ಉಕ್ಕಿ ಬಂದು ಅವನ ಕೆನ್ನೆಗೆ ಮುತ್ತು ಕೊಟ್ಟಳು. ವೀರೂ ಯಾಕೋ ಹೀಗೆಲ್ಲ ಹೊಟ್ಟೆ ಉರಿಸಿ ನನ್ನ ಕೊಲ್ತಾ ಇದ್ದಿಯೋ... ಕಣ್ಣೀರು ಉಕ್ಕಿ ಬಂದು, ಕಳೆದುಹೋಗಿದ್ದ ಚಿಂತೆಯಲ್ಲಿ ವಾರಿಜ ಮತ್ತೆ ಸಿಕ್ಕಿಕೊಂಡಳು. ವೀರುವನ್ನು ಬಿಟ್ಟು ಹೇಗೆ ಇರುವುದು, ತಾನು ಹೀಗೆ ಬಂದಿರುವ ಪರಿಣಾಮ ಮನೆಯಲ್ಲಿ ಏನಾಗಿರಬಹುದು, ಅಣ್ಣನಿಗೆ ಬರ್ತಾ ಇದ್ದೀನಿ ಅಂತ ಫೋನೇನೊ ಮಾಡಿದ್ದೆ, ಆದರೆ